ಇದಕ್ಕೆ ಅಡ್ಮಿನಿಸ್ಟ್ರೇಟ್ ಅಪ್ರೂವಲ್ ಕೂಡ ಆಗಿದೆ, ಇವೆಲ್ಲಾ ಕೆಲಸಗಳನ್ನು ಆದಷ್ಟು ಬೇಗನೆ ಪ್ರಾರಂಭ ಮಾಡಿ ಪೂರ್ತಿಗೊಳಿಸಲಾಗುವುದೆಂದು ತಮಗೆ ಹೇಳುತ್ತೇನೆ.

ಶ್ರೀ ಎ. ನಾರಾಯಣಸ್ವಾಮಿ: ಮಾನ್ಯ ಅಧ್ಯಕ್ಷರೆ, ಆನೇಕಲ್ ಪಕ್ಕದಲ್ಲಿ ಸ್ಥಾಪಿಸುವ ವಿದ್ಯುತ್ ಸ್ಥಾವರದ ಬಗ್ಗೆ ಕೇಳುತ್ತಿರುವುದು, 5 ಕೋಟಿ ರೂಪಾಯಿಗಳ ಪ್ರಾಜೆಕ್ಟ್ ಇದೆ, ಅದಕ್ಕೆ ಟೆಂಡರ್ ಆಗಿ, ಅದಕ್ಕೆ ಟೈಪ್ ಆಗಿ ಸಹಿ ಕೂಡ ಆಗಿ ಅದನ್ನು ಕೊಡುವ ಸಮಯದಲ್ಲಿ ಕಳೆದ ಎರಡೂವರೆ ತಿಂಗಳಿಂದ ಕೊಡುವುದಕ್ಕೆ ನಿಮಗೆ ಏನು ತೊಂದರೆ?

ಶ್ರೀ ಬಸವರಾಜ ಪಾಟೀಲ್: ಮಾನ್ಯ ಅಧ್ಯಕ್ಷರೆ, ಅವರು ಹೇಳುವುದು ನನ್ನ ಗಮನಕ್ಕೆ ಬಂದಿಲ್ಲ, ನನ್ನ ಗಮನಕ್ಕೆ ಬಂದ ನಂತರ ಈಗ ನಾವು ಕಾಲ್‌ಫಾರ್ ಮಾಡಿದ್ದೇವೆ, ಅದನ್ನು ಆದಷ್ಟು ಬೇಗ ಟೆಂಡರ್ ಕರೆದದ್ದನ್ನು ಇತ್ಯರ್ಥಗೊಳಿಸುತ್ತೇವೆ.

ಶ್ರೀ ಎ. ನಾರಾಯಣಸ್ವಾಮಿ: ಮಾನ್ಯ ಅಧ್ಯಕ್ಷರೆ, ಇದು ತಪ್ಪು ಮಾಹಿತಿ, ಆ ಕಡತದ ಹಿಂದೆ ನಾನಿದ್ದೇನೆ, ಬಹುತೇಕ ನಾನು ಎಲ್ಲಾ ಕಛೇರಿಗಳಿಗೂ ಅದರ ಬಗ್ಗೆ ಓಡಾಡಿದ್ದೇನೆ. ನನಗೆ ಒಂದು ನೋವಾಗುತ್ತದೆ, ಟೆಂಡರ್ ಕಾಪಿಯ ಪ್ರತಿಯನ್ನು ಸಂಸ್ಥೆಗೆ ಕೊಡುವಾಗ ವಿಧಾನಸೌಧದಿಂದ ತಡೆಯಾಗುವುದು ಸಂಸ್ಕಾರವಲ್ಲ. ಇದನ್ನು ನಾನು ನಿಜವಾಗಲೂ ನೋವಿನಿಂದ ಹೇಳುತ್ತೇನೆ. ಮಾನ್ಯ ಸಚಿವರು ಇದರ ಬಗ್ಗೆ ನಿರ್ದಿಷ್ಟವಾದ ದಿನಾಂಕವನ್ನು ಹೇಳಿದರೆ ಸೂಕ್ತವಾಗುತ್ತದೆ.

ಅಧ್ಯಕ್ಷರು: ಮಾನ್ಯ ಮಂತ್ರಿಗಳ ಕಛೇರಿಗೆ ಹೋಗಿ ತಾವು ಅವರೊಡನೆ ಡಿಸ್‌ಕಸ್ ಮಾಡಿ

ಶ್ರೀ ಬಸವರಾಜ ಪಾಟೀಲ್: ಮಾನ್ಯ ಅಧ್ಯಕ್ಷರೆ, ಆದಷ್ಟು ಬೇಗನೆ ಮಾನ್ಯ ಶಾಸಕರ ಬೇಡಿಕೆಯನ್ನು ಪೂರೈಸುತ್ತೇವೆ.

ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ತುಮ್ಮಲಕುಂಟಾ ಬಳಿ ಹೊಸಕೆರೆ ನಿರ್ಮಾಣ

156(1226) - ಶ್ರೀ ಬಸವಂತರೆಡ್ಡಿ ಮೊತಕಪಲ್ಲಿ (ಸೇಡಂ) : ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ತುಮ್ಮಲಕುಂಟಾ ಹತ್ತಿರದ ಹೊಸಕೆರೆ ನಿರ್ಮಾಣಕ್ಕಾಗಿ ಟೆಂಡರು ಆಗಿ ತಡೆಯಾಜ್ಞೆಯಿಂದ ಕೆಲಸ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಒಂದು - ಒಂದೂವರೆ ವರ್ಷದಿಂದ ಇಲಾಖೆಯವರು ನ್ಯಾಯಾಲಯದಲ್ಲಿ ಇದನ್ನು ಪ್ರಶ್ನಿಸಿ ತಡೆಯಾಜ್ಞೆಯನ್ನು ತೆರವು ಮಾಡಿಸಲು ಪ್ರಯತ್ನ ಮಾಡಿಲ್ಲದಿರಲು ಕಾರಣಗಳೇನು;

ಇ) ಈಗಲಾದರೂ ತಡೆಯಾಜ್ಞೆ ತಂದಿರುವ ಅಲ್ಪಸ್ವಲ್ಪ ಸ್ಥಳವನ್ನು ಬಿಟ್ಟು ಅಥವಾ ತಡೆಯಾಜ್ಞೆ ತೆರವಾಗುವಂತೆ ಮಾಡಿ ಸರ್ಕಾರವು ಕೆರೆಯ ನಿರ್ಮಾಣಕ್ಕೆ ಕ್ರಮ ವಹಿಸುವುದೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು) :

ಅ) ಹೌದು.

ಆ) ತಡೆಯಾಜ್ಞೆಯನ್ನು ತೆರವುಗೊಳಿಸಲು ಇಲಾಖೆ ವತಿಯಿಂದ ಈಗಾಗಲೇ ಸೇಡಂ ತಾಲ್ಲೂಕು ಮುನ್ಸಿಫ್ ನ್ಯಾಯಾಲಯದಲ್ಲಿ ಕಂಡಿಕೆವಾರು ಉತ್ತರವನ್ನು ಸಲ್ಲಿಸಲಾಗಿದೆ.

ಇ) ಈ ಕೆರೆಯ ನಿರ್ಮಾಣದ ಸಲುವಾಗಿ ಭೂಸ್ವಾಧೀನಕ್ಕಾಗಿ ಮುಂಗಡವಾಗಿ ರೂ. 5.25 ಲಕ್ಷ ಎಸ್.ಎಲ್.ಎ.ಓ. ಗುಲ್ಬರ್ಗಾ ಇವರಿಗೆ ಹಣವನ್ನು ಭರಿಸಲಾಗಿದೆ. ಈಗಾಗಲೇ ಭೂಸ್ವಾಧೀನ ಪ್ರಸ್ತಾವನೆಯನ್ನು ಕೂಡಾ ಸಲ್ಲಿಸಲಾಗಿದೆ. ಇಷ್ಟರಲ್ಲೇ 4 (1) ನೋಟಿಫಿಕೇಶನ್ ಆಗುವ ಹಂತದಲ್ಲಿದೆ. ತಡೆಯಾಜ್ಞೆ ತೆರವುಗೊಂಡ ನಂತರ ಕೆಲಸವನ್ನು ಗುತ್ತಿಗೆ ಆಧಾರದ ಮೇಲೆ ಪ್ರಾರಂಭಿಸಲಾಗುವುದು.

ಶ್ರೀ ಬಸವಂತರೆಡ್ಡಿ ಮೊತಕಪಲ್ಲಿ: ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆಗೆ ತಡೆಯಾಜ್ಞೆಯನ್ನು ತೆರವುಗೊಳಿಸಲು ಇಲಾಖೆ ವತಿಯಿಂದ ಈಗಾಗಲೇ ಸೇಡಂ ತಾಲ್ಲೂಕು ಮುನ್ಸಿಫ್ ನ್ಯಾಯಾಲಯದಲ್ಲಿ ಕಂಡಿಕೆವಾರು ಉತ್ತರವನ್ನು ಸಲ್ಲಿಸಲಾಗಿದೆ ಎಂದು ತಿಳಿಸಿದ್ದಾರೆ. ಮತ್ತು ಈ ಕೆರೆಯ ನಿರ್ಮಾಣದ ಸಲುವಾಗಿ ಭೂಸ್ವಾಧೀನಕ್ಕಾಗಿ ಮುಂಗಡವಾಗಿ 5.25 ಲಕ್ಷ ರೂಪಾಯಿಗಳನ್ನು ಎಸ್.ಎಲ್.ಎ.ಓ. ಗುಲ್ಬರ್ಗಾ ಇವರಿಗೆ ಹಣವನ್ನು ಭರಿಸಲಾಗಿದೆ ಎಂದು ತಿಳಿಸಿದ್ದಾರೆ. ಈ ಕೆರೆಯನ್ನು ನಿರ್ಮಾಣ ಮಾಡಲು ಪ್ರಾರಂಭವಾಗಿ ಒಂದುವರೆ ವರ್ಷವಾಗಿತ್ತು, ಆ ಭೂಮಾಲೀಕರು ನ್ಯಾಯಾಲಯದಿಂದ ತಡೆಯಾಜ್ಞೆಯನ್ನು ತಂದರು, ನ್ಯಾಯಾಲಯದಿಂದ ನೋಟೀಸ್ ಹೋದ ತಕ್ಷಣ ಇಲಾಖೆಯವರು ಭೂಮಾಲೀಕರಿಗೆ ಹಣವನ್ನು ಕೊಟ್ಟಿದ್ದರೆ ಆ ಕೆರೆ ಇಲ್ಲಿಯವರೆಗೆ ನಿರ್ಮಾಣವಾಗುತ್ತಿತ್ತು. ಬಂಜಾರಾ ಜನಾಂಗದವರಿಗೆ 240 ಎಕರೆ ಜಮೀನಿಗೆ ನೀರಾವರಿಯಾಗುತ್ತಿತ್ತು. ಇದು ಇಲಾಖೆಯವರ ಬೇಜವಾಬ್ದಾರಿ. ಈ ಕೂಡಲೇ ಕೆರೆಯನ್ನು ಬೇಗ ನಿರ್ಮಾಣ ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಮಂತ್ರಿಗಳಲ್ಲಿ ವಿನಂತಿಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ಕೆರೆ ಮಂಜೂರಾಗಿರುವುದು ದಿನಾಂಕ: 23-3-2001 ರಲ್ಲಿ ಅದಕ್ಕೆ ದಿನಾಂಕ:27-8-2001 ರಲ್ಲಿ ಅಡ್ಮಿನಿಸ್ಟ್ರೇಟೀವ್ ಅಪ್ರೂವಲ್ ಕೊಡಲಾಗಿದೆ, ಆದರೆ ಭೂಸ್ವಾಧೀನ ಮಾಡಿಕೊಂಡು ಅದಕ್ಕೆ ಹಣವನ್ನು ತುಂಬಲಿಲ್ಲ. ಭೂ ಸ್ವಾಧೀನವನ್ನು ಮಾಡಿಕೊಳ್ಳದೆ ಈ ಕಾರ್ಯಕ್ರಮವನ್ನು ಪ್ರಾರಂಭ ಮಾಡಿದ್ದರು. ಆದಕ್ಕಾಗಿ ಆ ಭೂಮಾಲೀಕರು ಹೋಗಿ ಸ್ಟೇ ತಂದಿದ್ದಾರೆ, ಆ ಕೆಲಸ ಸ್ಥಗಿತವಾಯಿತ. ಇತ್ತೀಚೆಗೆ ದಿನಾಂಕ: 8-7-2002 ರಂದು ಸುಮಾರು 2 ಲಕ್ಷ 25 ಸಾವಿರ ರೂಪಾಯಿಗಳನ್ನು ತುಂಬಿ ಆ ಕೇಸ್ ವೆಕೇಟ್ ಮಾಡಿಸುವುದಕ್ಕೆ ಕೇಳಿಕೊಂಡಿದ್ದೇವೆ. ವೆಕೇಟ್ ಆದ ತಕ್ಷಣ ಆ ಕೆಲಸ ಪ್ರಾರಂಭವಾಗುತ್ತದೆ. ಇದರಲ್ಲಿ ಯಾರ ನೆಗ್ಲಿಜೆನ್ಸಿ ಇಲ್ಲ, ಭೂ ಮಾಲೀಕರು ಎಲ್ಲಿಯವರೆಗೆ ನೀವು ಹಣ ಕೊಡುವುದಿಲ್ಲ ಅಲ್ಲಿಯವರೆಗೆ ನಮ್ಮ ಹತ್ತಿರ ನೀವು ಬರಬೇಡಿ ಎಂದು ಸ್ಟೇ ತಂದ ಮೇಲೆ ಈ ತಾಪತ್ರಯ ಆಗಿದೆ. ಏನೇ ಆಗಲಿ ಈ ಸಮಸ್ಯೆ ಬಗೆಹರಿದಿದೆ. ಹಣ ಕೂಡ ತುಂಬಿದ್ದೇವೆ, ಆದಷ್ಟು ಬೇಗನೆ ಈ ಕೆಲಸವನ್ನು ಪ್ರಾರಂಭ ಮಾಡುತ್ತೇವೆ.

ಬ್ರಹ್ಮಾವರ ವಿಧಾನಸಭಾಕ್ಷೇತ್ರದಲ್ಲಿ ರೈತ ಕಾಯಕ ಕೆರ ಕಾರ್ಯಕ್ರಮ

157(1164) - ಶ್ರೀ ಜಯಪ್ರಕಾಶ್ ಹೆಗ್ಡೆ ಕೆ. (ಬ್ರಹ್ಮಾವರ) : ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ಜಿಲ್ಲೆಯ ಉಡುಪಿ ತಾಲ್ಲೂಕಿನ ಕೆರೆಗಳ ಪಟ್ಟಿಯಲ್ಲಿರುವ ಒಟ್ಟು ಕೆರೆಗಳ ಸಂಖ್ಯೆ ಎಷ್ಟು; ಬ್ರಹ್ಮಾವರ ವಿಧಾನಸಭಾ ಕ್ಷೇತ್ರದಲ್ಲಿ ಬರುವ ಕೆರೆಗಳ ಸಂಖ್ಯೆ ಹಾಗೂ ಅವುಗಳ ವಿವರಗಳನ್ನು ನೀಡುವುದು;